

ವಿಕರಾಳವಾಗಿ ಅಮೂರ್ತವೇ ಆಕಾರ ಪಡೆದಂತೆ ನೆಲದಿಂದೆತ್ತರಕ್ಕೆ ಚಾಚಿಕೊಂಡಿರುತ್ತವೆ. ಈ ನಡುವೆ ಮಳೆನಿಂತು, ಒಂದೆರಡು ದಿನ ಬಿಸಿಲು ಕಾದರೆ, ಬಿದ್ದ ಮರದ ತೊಗಟೆಯು ಬಂಟಮಲೆಯ ತೇವಾಂಶದಲ್ಲಿ ನಿಧಾನವಾಗಿ ಉಬ್ಬಿಕೊಳ್ಳುತ್ತದೆ. ಆಗ ಅವುಗಳೊಳಗಿಂದ ವಿಚಿತ್ರಾಕಾರದ ಹುಳುಗಳು ಹೊರಬರುತ್ತವೆ. ಹಲವು ಬಣ್ಣಗಳ, ವಿವಿಧ ಆಕಾರಗಳ ಆ ಬಣ್ಣದ ವೇಷದ ಹುಳುಗಳನ್ನು ನೋಡಿ ಆರಂಭದಲ್ಲಿ ನಾನು ಹೆದರುತ್ತಿದ್ದೆನಾದರೂ ನಿಧಾನವಾಗಿ ಅವುಗಳೊಡನೆಯೂ ಗೆಳೆತನ ಬೆಳೆಸಿದೆ. ಕೈಯಲ್ಲಿ ಸಣ್ಣ ಕೋಲು ಹಿಡಿದು ಪ್ರೀತಿಯಿಂದ ಆ ಹುಳುಗಳನ್ನು ಕೆಣಕುತ್ತಿದ್ದೆ. ಆಗೆಲ್ಲ ತಮ್ಮ ಪುಟ್ಟ ಹೆಡೆಬಿಚ್ಚಿ ಪ್ರತಿಭಟನೆ ತೋರುತ್ತಿದ್ದ ಅವುಗಳು ಮತ್ತೆ ತೆವಳುತ್ತಾ ಮರೆಗೆ ಸರಿಯುತ್ತಿದ್ದುವು. ಆ ಹುಳುಗಳಿಗೆ ನಾನು ಕೆಂಚ, ಕರಿಯ, ಬೊಡ್ಡ ಎಂದೆಲ್ಲಾ ಹೆಸರಿಡುತ್ತಿದ್ದೆ. ಆ ಹೆಸರಿಂದ ಅವುಗಳನ್ನು ಕರೆಯುವಾಗ ಅವು ತಲೆಯಾಡಿಸುತ್ತಿರುವಂತೆ ನನಗಂತೂ ಅನ್ನಿಸುತ್ತಿತ್ತು. ಹುಳುಗಳ ಜೊತೆಗಣ ನನ್ನ ಸಂಭಾಷಣೆಗಳನ್ನು ಅಮ್ಮನಿಗೆ ಹೇಳಿದರೆ ಅಮ್ಮ ಇನ್ನಷ್ಟು ಕಥೆಗಳನ್ನು ಹೇಳುತ್ತಿದ್ದರು. ಆಗ ಅಮ್ಮ ಹೇಳಿದ ಕಥೆಗಳಲ್ಲಿ ಮಳೆರಾಯನ ಒಂದೆರಡು ಕಥೆಗಳೂ ಇದ್ದವು. ಈಗಲೂ ನೆನಪಿರುವ ಒಂದು ಕತೆಯ ಪ್ರಕಾರ,